339

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\7566\2014\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 26/09/2019

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ\ ಸಾರ್ವಜನಿಕ ನೌಕರರಾದ ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕ್ ಆಲದಕೇರಿ ಗ್ರಾಮ ಪಂಚಾಯತ್‌ನ 1) ಅಧ್ಯಕ್ಷರಾಗಿದ್ದ ಶ್ರೀ.ಜಿ.ವಿ.ಕುಲಕರ್ಣಿ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದ 2) ಶ್ರೀ.ಎಸ್.ಹೆಚ್.ಮಾವಿನತೋಪ [ಪ್ರಸ್ತುತ ನಿವೃತ್ತ] ಮತ್ತು 3) ಶ್ರೀ.ಎಸ್.ಬಿ.ದ್ಯಾವಕ್ಕಳನವರ [ಪ್ರಸ್ತುತ ನಿವೃತ್ತ] ರವರ ದುರ್ನಡತೆಯ ಬಗ್ಗೆ.

**********

ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕ್ ಆಲದಕೇರಿ ಗ್ರಾಮದ ನಿವಾಸಿಯಾದ ಶ್ರೀ.ಧನಂಜಯ ಬಿ ಮಸಣಗಿ ಬಿನ್ ಬಸಪ್ಪ ಮಸಣಗಿ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕ್ ಆಲದಕೇರಿ ಗ್ರಾಮ ಪಂಚಾಯತ್‌ನ 1) ವಿಷಯ ನಿರ್ವಾಹಕರಾದ ಶ್ರೀ.ದೊಡ್ಡಪ್ಪ ಕೆ ಗೌಡರ, 2) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಕೆ.ಎಂ.ಶೆಟ್ಟಕೇರಿ, 3) ಅಧ್ಯಕ್ಷರಾಗಿದ್ದ ಶ್ರೀ.ಜಿ.ವಿ.ಕುಲಕರ್ಣಿ ಮತ್ತು 4) ಸದಸ್ಯರಾಗಿದ್ದ ಶ್ರೀಮತಿ.ಪಾರ್ವತವ್ವ ವಿ ಹೊಂಬರಡಿ (ಇನ್ನು ಮುಂದೆ ಕ್ರಮವಾಗಿ, '1 ರಿಂದ 4ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಹಿರೇಕೆರೂರು ತಾಲ್ಲೂಕ್ ಆಲದಕೇರಿ ಗ್ರಾಮ ಪಂಚಾಯತ್‌ನಲ್ಲಿ ಕಂದಾಯ ವಸೂಲಾತಿ ಮತ್ತು ಎಂಜಿಎನ್‌ಆರ್‌ಇಜಿ ಯೋಜನೆ ಅಡಿ ಹಣದ ಅವ್ಯವಹಾರ ಆಗಿದೆಯೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

340



ತಾವು ಕಳೆದ 17 ವರ್ಷಗಳಿಂದ ಆಲದಕೇರಿ ಗ್ರಾಮ ಪಂಚಾಯತ್‌ನಲ್ಲಿ ಗುಮಾಸ್ತರಾಗಿ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ಹೇಳುತ್ತಾ, ದೂರಿನ ಎಲ್ಲಾ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಪಂಚಾಯತ್ ಕಾರ್ಯದರ್ಶಿ ಶ್ರೇಣಿ–1 ಎಂದು ಪದೋನ್ನತಿ ಹೊಂದಿ ಆಲದಕೇರಿ ಗ್ರಾಮ ಪಂಚಾಯತ್‌ಗೆ ಕರ್ತವ್ಯಕ್ಕೆ ಹಾಜರಾಗಿ ದಿ:31/05/11ರಂದು ವಯೋ ನಿವೃತ್ತಿ ಹೊಂದಿರುವುದಾಗಿ ಹೇಳಿ, ದೂರಿನ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ.

5. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು 2010 ರಿಂದ 21/06/2011 ರವರೆಗೆ ಆಲದಕೇರಿ ಗ್ರಾಮ ಪಂಚಾಯತ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದು, ಆ ಸಮಯದಲ್ಲಿ ಶ್ರೀ.ವಿ.ಆರ್.ಪಾಟೀಲ್ ರವರು ಪಂಚಾಯತ್ ಅಧ್ಯಕ್ಷರಾಗಿ ಮತ್ತು 2ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ತದನಂತರ, ದಿನಾಂಕ:22/06/11 ರಿಂದ 10/07/2012 ರವರೆಗೆ ಸದರಿ ಪಂಚಾಯತ್‌ನ ಅಧ್ಯಕ್ಷರಾಗಿದ್ದು, ಆ ಸಮಯಕ್ಕೆ ಶ್ರೀ.ಮಾವಿನತೋಪ, ಶ್ರೀ.ದೇವರಾಜ ಮತ್ತು ಶ್ರೀ.ದ್ಯಾವಕ್ಕಳವರ ರವರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಸ್ವಜನ ಪಕ್ಷಪಾತದಿಂದ ಸದರಿ ಶ್ರೀ.ವಿ.ಆರ್.ಪಾಟೀಲ್, ಶ್ರೀ.ಮಾವಿನತೋಪ ಮತ್ತು ಶ್ರೀ.ದ್ಯಾವಕ್ಕಳನವರ ರವರನ್ನು ಉದ್ದೇಶಪೂರ್ವಕವಾಗಿ ದೂರಿನಲ್ಲಿ ಸೇರಿಸದೇ, ತಮ್ಮ ಕಾರ್ಯಾವಧಿಯಲ್ಲಿ ಪಂಚಾಯತ್ ವ್ಯಾಪ್ತಿಯಲ್ಲಿ ಉತ್ತಮ ಕೆಲಸಗಳನ್ನು ಮಾಡಿದ್ದರೂ, ದ್ವೇಷ ಸಾಧನೆಗಾಗಿ ದೂರುದಾರರು ತಮ್ಮ ವಿರುದ್ಧ ಸದರಿ ಸುಳ್ಳು ದೂರನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

6. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಆಲದಕೇರಿ ಗ್ರಾಮ ಪಂಚಾಯತ್ ಸದಸ್ಯರಾಗಿ ಈ ಹಿಂದೆ ಕಾರ್ಯನಿರ್ವಹಿಸಿದ್ದು, ತಮ್ಮ ಅವಧಿಯಲ್ಲಿ ಕೈಗೊಂಡ ಎಲ್ಲಾ ಕಾಮಗಾರಿಗಳನ್ನು ಪಾರದರ್ಶಕವಾಗಿ ಮತ್ತು ಕಾನೂನಿಗೆ ಅನುಗುಣವಾಗಿ ಮಾಡಿದ್ದು, ಸರ್ಕಾರದ ಹಣವನ್ನು ಸ್ವಂತಕ್ಕೆ ದುರುಪಯೋಗ ಪಡಿಸಿಕೊಂಡಿಲ್ಲ. ದೂರುದಾರರು ದುರುದ್ದೇಶಪೂರ್ವಕವಾಗಿ ಸುಳ್ಳು ಸಂಗತಿಗಳನ್ನು ನಮೂದಿಸಿ, ಸದರಿ ದೂರನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

7. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದಾರೆ.

BGM/7566/14

342



8. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ.ಎಸ್.ಹೆಚ್.ಮಾವಿನತೋಪ, ಶ್ರೀ.ದೇವರಾಜ, ಮತ್ತು ಶ್ರೀ.ಎಸ್.ಬಿ.ದ್ಯಾವಕ್ಕಳವರ ರವರುಗಳನ್ನು ಕ್ರಮವಾಗಿ 5 ರಿಂದ 7ನೇ ಎದುರುದಾರರುಗಳನ್ನಾಗಿ ದೂರಿನ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆ ಮತ್ತು ಖರ್ಚುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಕೇಳಲಾಯಿತು.

9. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಆಲದಕೇರಿ ಗ್ರಾಮ ಪಂಚಾಯತ್‌ನಲ್ಲಿ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ದಿ:16/06/11 ರಿಂದ 04/08/11ರವರೆಗೆ ಕರ್ತವ್ಯ ನಿರ್ವಹಿಸಿ, ದಿನಾಂಕ:31/05/13ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದು, ತಮ್ಮ ಒಂದು ತಿಂಗಳು 20 ದಿನಗಳ ಕಾರ್ಯಾವಧಿಯಲ್ಲಿ ಯಾವುದೇ ಹಣ ದುರುಪಯೋಗ ಮತ್ತು ಕಳಪೆ ಕಾಮಗಾರಿ ಆಗಿಲ್ಲವೆಂದು ಹೇಳಿದ್ದಾರೆ.

10. ಆರನೇ (6ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಪಂಚಾಯತ್‌ನಲ್ಲಿ ತಮ್ಮ ಅಲ್ಪ ಕರ್ತವ್ಯದ ಅವಧಿಯಲ್ಲಿ ಯಾವುದೇ ಕರ್ತವ್ಯ ಲೋಪ ಆಗಿಲ್ಲ. ಲೆಕ್ಕಪರಿಶೋಧನಾ ವರದಿಯಲ್ಲಿ ತಮ್ಮ ಹೆಸರು ನಮೂದಾಗಿದೆಯೆಂಬ ಕಾರಣಕ್ಕಾಗಿ ಅವ್ಯವಹಾರ ಮಾಡಿದೆಯೆಂಬ ಅರ್ಥವನ್ನು ಕಲ್ಪಿಸುವುದಿಲ್ಲವೆಂದು ಹೇಳಿದ್ದಾರೆ.

11. ಏಳನೇ (7ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಆಲದಕೇರಿ ಗ್ರಾಮ ಪಂಚಾಯತ್‌ನಲ್ಲಿ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ದಿ:02/11/11 ರಿಂದ 11/06/12ರವರೆಗೆ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ:30/06/16ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದು, ತಮ್ಮ ಕಾರ್ಯಾವಧಿಯಲ್ಲಿ ಯಾವುದೇ ಹಣ ದುರುಪಯೋಗ ಮತ್ತು ಕಳಪೆ ಕಾಮಗಾರಿ ಆಗಿಲ್ಲವೆಂದು ಹೇಳಿದ್ದಾರೆ.

12. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) 2011–12ನೇ ಸಾಲಿನ ಎಂಜಿಎನ್‌ಆರ್‌ಇಜಿ ಯೋಜನೆ ಅಡಿ ಆಲದಕೇರಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ "ಆಲದಕೇರಿ ಗ್ರಾಮದ ಶ್ರೀ.ವೀರಭದ್ರಪ್ಪ ಹೊಂಬರಡಿ ರವರ ಹೊಲದಿಂದ ಶ್ರೀ.ಬಸವಂತಪ್ಪ ಹೊರಗಿ ರವರ ಹೊಲದವರೆಗೆ ರೈತ ಸಂಪರ್ಕ ರಸ್ತೆ ನಿರ್ಮಾಣ" ಕಾಮಗಾರಿ (ಕಾಮಗಾರಿ ಸಂಖ್ಯೆ–13, ಅಂದಾಜು ₹1.50 ಲಕ್ಷ) ಗೆ ಸಂಬಂಧಪಟ್ಟ ಅಂದಾಜು ಪಟ್ಟಿ, ಕೆಲಸಕ್ಕಾಗಿ

3h2



ಸಲ್ಲಿಸಿದ ಅರ್ಜಿ (ನಮೂನೆ-6), ಹಾಜರಾತಿ ವಹಿ, ಅಕುಶಲ ಕೂಲಿ ಪಾವತಿಯ ಹಾಜರಾತಿ ವಹಿ, ಎನ್‌ಎಂಆರ್, ಕೂಲಿ ಪಾವತಿ ವಹಿ, ಭಾವಚಿತ್ರಗಳು ಮುಂತಾದ ದಾಖಲೆಗಳಿವೆ;

2) ದೂರಿನ 4ನೇ ಎದುರುದಾರರು ಮತ್ತು ಅವರ ಪತಿ ಶ್ರೀ.ವೀರಭದ್ರಪ್ಪ ಹೊಂಬರಡಿ (ಉದ್ಯೋಗ ಚೀಟಿ ಸಂಖ್ಯೆ-459) ರವರು ಕೆಲಸ ಕೋರಿ ಆಲದಕೇರಿ ಗ್ರಾಮ ಪಂಚಾಯತ್‌ಗೆ ಅರ್ಜಿಯನ್ನು ಸಲ್ಲಿಸಿದ್ದಾರೆಂದು ದಿ:26/09/11ರ ನಮೂನೆ-6ರಲ್ಲಿ ಕಂಡು ಬಂದಿದೆ. ಸದರಿ ಅರ್ಜಿಗೆ ಶ್ರೀ.ವೀರಭದ್ರಪ್ಪ ಹೊಂಬರಡಿ ರವರು ಪ್ರಥಮ ಅರ್ಜಿದಾರರಾಗಿ ಸಹಿ ಮಾಡಿದ್ದಾರೆ. 4ನೇ ಎದುರುದಾರರು ಮತ್ತು ಅವರ ಪತಿ ಸದರಿ ಕಾಮಗಾರಿಯನ್ನು ಇತರೆ ಕೂಲಿಯವರೊಂದಿಗೆ ನಿರ್ವಹಿಸಿದ ಬಗ್ಗೆ ಹಾಜರಾತಿ ವಹಿ (ಮಸ್ಟರ್ ರೋಲ್) ಯ ಕ್ರಮ ಸಂಖ್ಯೆ-46 ಮತ್ತು 47ರಲ್ಲಿ ಕಂಡು ಬಂದಿದೆ. ಸದರಿ ಕಾಮಗಾರಿ ದಿ:28/10/11 ರಿಂದ ಪ್ರಾರಂಭಗೊಂಡು ದಿ:04/11/11ಕ್ಕೆ ಮುಕ್ತಾಯಗೊಂಡಿದೆ. ಸದರಿ ಕಾಮಗಾರಿಯ ಬಾಬ್ತು ಅಕುಶಲ ಕೂಲಿ ಮೊತ್ತ ಒಟ್ಟು ₹1,24,250/-ಗಳನ್ನು ದಿ:25/01/12ರ ಚೆಕ್ ಸಂಖ್ಯೆ-418481ರಲ್ಲಿ ಪಾವತಿಸಿದೆಯೆಂದು ಪಂಚಾಯತ್‌ನ ಎಂಜಿಎನ್‌ಆರ್‌ಇಜಿ ಯೋಜನೆಯ ಖಾತೆಯ ಬ್ಯಾಂಕ್ ಪಾಸ್ ಪುಸ್ತಕ ಮತ್ತು ನಗದು ವಹಿಯಲ್ಲಿ ಕಂಡು ಬಂದಿದೆ. ಸದರಿ ಚೆಕ್‌ನ ಬಾಬ್ತು ಕೂಲಿ ಹಣ ಕೂಲಿಗಾರರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಆಗಿಲ್ಲ. ಸದರಿ ಕಾಮಗಾರಿಯನ್ನು ನಿರ್ವಹಿಸಿದ ಕಾರ್ಮಿಕರು ಜಾಬ್ ಕಾರ್ಡ್ ಹೊಂದಿರುವ ಬಗ್ಗೆ ಸದರಿ ಜಾಬ್ ಕಾರ್ಡ್ ಪ್ರತಿಗಳಿಲ್ಲ. ಸದರಿ ಕಾರ್ಮಿಕರು ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ಬಗ್ಗೆ ಪಾಸ್ ಪುಸ್ತಕ ಅಥವಾ ಖಾತೆಯ ಉದ್ಧೃತ ಭಾಗ ಲಭ್ಯವಿಲ್ಲ. ಸದರಿ ಕಾಮಗಾರಿಯ ಬಾಬ್ತು ಮೊತ್ತವನ್ನು ಮೇಲೆ ಹೇಳಿದ ಚೆಕ್ ಮುಖೇನ ಪಾವತಿ ಮಾಡುವ ಸಮಯದಲ್ಲಿ ದೂರಿನ 3ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿ ಮತ್ತು 7ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ;

3) ಸದರಿ ಕಾಮಗಾರಿ ನಡೆಯುವ ಅವಧಿಯಲ್ಲಿ 4ನೇ ಎದುರುದಾರರು ಮತ್ತು ಇತರೆ 71 ಕೂಲಿಗಾರರು ಅಕುಶಲ ಕೂಲಿಯವರಾಗಿ ಕೆಲಸ ನಿರ್ವಹಿಸಿದ್ದರೂ, ಕೇವಲ 18 ಕೂಲಿಗಾರರಿಗೆ (4ನೇ ಎದುರುದಾರರ ಪತಿ ಶ್ರೀ.ವೀರಭದ್ರಪ್ಪ ಹೊಂಬರಡಿ ಸೇರಿ) ಕೂಲಿ ಹಣವನ್ನು ನೀಡಿರುವುದು ದಾಖಲೆಗಳಲ್ಲಿ ಕಂಡು ಬಂದಿದೆ. ಸದರಿ ಕೂಲಿಯವರ ಖಾತೆಗೆ ನೇರವಾಗಿ ಹಣ ಜಮಾ ಮಾಡಿದ ಬಗ್ಗೆ ದಾಖಲೆಗಳಿಲ್ಲದಿರುವುದರಿಂದ, ಸದರಿ ಮೊತ್ತ ದುರುಪಯೋಗವಾಗಿದೆ. ಸದರಿ ದುರುಪಯೋಗ ಮೊತ್ತಕ್ಕೆ 3 ಮತ್ತು 7ನೇ ಎದುರುದಾರರು ಜವಾಬ್ದಾರರಾಗಿದ್ದಾರೆ. 4ನೇ ಎದುರುದಾರರು ಸದರಿ ಪಂಚಾಯತ್‌ನ ಸದಸ್ಯರಾಗಿದ್ದುಕೊಂಡೇ ಪಂಚಾಯತ್ ವತಿಯಿಂದ ನಿರ್ವಹಿಸಲಾದ ಕಾಮಗಾರಿಯಲ್ಲಿ ಇತರೆ ಕೂಲಿಗಾರರೊಂದಿಗೆ ತಾವು ಸ್ವತಃ ಭಾಗಿಯಾಗಿ ಆರ್ಥಿಕ ಲಾಭವನ್ನು ಹೊಂದಿದ್ದಾರೆ;

4) "ಆಲದಕೇರಿ ಗ್ರಾಮದ ಶ್ರೀ.ಫಕೀರಪ್ಪ ಗೋಣೇರ ರವರ ಹೊಲದಿಂದ ಶ್ರೀ.ಶಂಕರಪ್ಪ ಶಿರಗೇರಿ ರವರ ಹೊಲದವರೆಗೆ ರಸ್ತೆ ನಿರ್ಮಾಣ ಕಾಮಗಾರಿ" ನಡೆಯುವ ಸಮಯದಲ್ಲಾಗಲೀ ಅಥವಾ

BSM/7566/14

(343)



ಕೂಲಿಗಾರರಿಗೆ ಹಣ ಪಾವತಿ ಮಾಡಿದೆಯೆಂದು ಹೇಳಿದ ಸಮಯದಲ್ಲಾಗಲೀ (ಫೆಬ್ರವರಿ, 2013) ಈ ದೂರಿನ ಯಾವುದೇ ಎದುರುದಾರರು ಸದರಿ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸುತ್ತಿರಲಿಲ್ಲ;

5) 2012–13ನೇ ಸಾಲಿನ ಆಲದಕೇರಿ ಗ್ರಾಮ ಪಂಚಾಯತ್‌ನ ಲೆಕ್ಕ ತಪಾಸಣಾ ವರದಿಯನ್ವಯ 13ನೇ ಹಣಕಾಸು ಯೋಜನೆ ಅಡಿ ನಿರ್ವಹಿಸಲಾದ ಈ ಕೆಳಗಿನ ವೆಚ್ಚಗಳಿಗೆ ಸಂಬಂಧಿಸಿದಂತೆ, ವೋಚರ್‌ಗಳನ್ನು ಹಾಜರುಪಡಿಸಿಲ್ಲ –

| ಕ್ರ.ಸಂ. | ಚೆಕ್ ಸಂಖ್ಯೆ / ದಿನಾಂಕ | ಮೊತ್ತ ₹ಗಳಲ್ಲಿ | ವಿವರ |
|---|---|---|---|
| 1 | 164413, 02/05/12 | 15000.00 | ರೇಣುಕಾ ಪೈಪ್ & ಟ್ಯೂಬ್, ರಾಣೇಬೆನ್ನೂರು |
| 2 | 164414, 02/05/12 | 14500.00 | –”– |
| 3 | 164415, 03/05/12 | 26240.00 | –”– |
| 4 | 10675, 18/10/12 | 12670.00 | ವಿಶ್ವಾಸ್ ಎಲೆಕ್ಟ್ರಿಕಲ್ಸ್ ವರ್ಕ್ಸ್, ಹಿರೇಕೆರೂರು |
| 5 | 10676, 18/10/12 | 22340.00 | –”– |
| 6 | 10677, 18/10/12 | 24280.00 | –”– |
| | ಒಟ್ಟು ಮೊತ್ತ | 115030.00 | |

6) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 1995ರ ನಿಯಮ 20ರನ್ವಯ ಪ್ರತಿ ಖರ್ಚಿಗೆ ಸಂಬಂಧಿಸಿದಂತೆ ಬಿಲ್ ಅಥವಾ ವೋಚರ್‌ಗಳು ಇರಬೇಕೆನ್ನುವುದು ಕಡ್ಡಾಯವಾಗಿದೆ. ಆ ರೀತಿಯ ಬಿಲ್ ಮತ್ತು ವೋಚರ್‌ಗಳು ಲಭ್ಯವಿಲ್ಲ. ಸದರಿ ಚೆಕ್‌ಗಳನ್ನು ನೀಡಿದ ಬಗ್ಗೆ ಚೆಕ್‌ಗಳನ್ನು ಪಡೆದವರಿಂದ ಸ್ವೀಕೃತಿಯನ್ನು ಪಡೆಯ ಬೇಕೆಂದು ನಿಯಮ, 26ರನ್ವಯ ಕಡ್ಡಾಯವಾಗಿದೆ. ಸದರಿ ಚೆಕ್‌ಗಳನ್ನು ಆಯಾಯ ವ್ಯಕ್ತಿ \ ಸಂಸ್ಥೆ ಹೆಸರಿಗೆ ನೀಡಿದ ಬಗ್ಗೆ ಸ್ವೀಕೃತಿಯನ್ನು ಪಡೆದ ಬಗ್ಗೆ ದಾಖಲೆಯಿಲ್ಲ. ಕಾರಣ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 1995ರ ನಿಯಮ 20 ಮತ್ತು 26ರ ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಸದರಿ ಪಾವತಿಗಳ ಪೈಕಿ ಕ್ರಮ ಸಂಖ್ಯೆ–1 ರಿಂದ 3ರಲ್ಲಿನ ಪಾವತಿಗಳ ಅವಧಿಯಲ್ಲಿ ದೂರಿನ 3ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿ ಮತ್ತು 7ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ಸದರಿಯವರುಗಳು ದುರುಪಯೋಗ ಮೊತ್ತ ₹55,740/– ಗಳಿಗೆ ಜವಾಬ್ದಾರರಾಗಿದ್ದಾರೆ;

7) ಮುಂದುವರೆದು, ಎಂಜಿಎನ್‌ಆರ್‌ಇಜಿ ಯೋಜನೆಯ ನಗದು ವಹಿಯ ಪುಟ ಸಂಖ್ಯೆ–38 ರಿಂದ 65ರಲ್ಲಿ ಈ ಕೆಳಗಿನಂತೆ ದಾಖಲಾಗಿದೆ –

| ಕ್ರ. ಸಂ. | ಚೆಕ್ ಸಂಖ್ಯೆ | ಮೊತ್ತ ₹ಗಳಲ್ಲಿ |
|---|---|---|
| 1 | 164505 | 18663.00 |
| 2 | 164506 | 14748.00 |

3hh



| | | |
|---|---|---|
| 3 | 164507 | 63017.00 |
| 4 | 164508 | 18329.00 |
| 5 | 164509 | 8065.00 |
| 6 | 164510 | 53829.00 |
| 7 | 164511 | 2430.00 |
| 8 | 164512 | 51891.00 |
| 9 | 164513 | 56350.00 |
| 10 | 164514 | 33750.00 |
| 11 | 164515 | 8710.00 |
| 12 | 164516 | 18329.00 |
| 13 | 164517 | 36841.00 |
| 14 | 164518 | 53908.00 |
| 15 | 164519 | 25515.00 |
| 16 | 164520 | 18225.00 |
| 17 | 164521 | 14580.00 |
| 18 | 164522 | 21870.00 |
| 19 | 164523 | 12442.00 |
| 20 | 164524 | 12442.00 |
| 21 | 164525 | 9954.00 |
| 22 | 418351 | 7465.00 |
| 23 | 418352 | 183638.00 |
| 24 | 418353 | 97351.00 |
| 25 | 418354 | 134750.00 |
| 26 | 148355 | 193375.00 |
| 27 | 148356 | 34048.00 |
| 28 | 148357 | 36736.00 |
| 29 | 148358 | 112350.00 |
| 30 | 148359 | 72308.00 |
| 31 | 148360 | 42605.00 |
| 32 | 148361 | 105472.00 |
| 33 | 148362 | 8192.00 |
| 34 | 148363 | 13084.00 |
| 35 | 148364 | 45500.00 |
| 36 | 148365 | 18750.00 |

Bsm/7566/14

345



| | | |
|---|---|---|
| 37 | 148366 | 31671.00 |
| 38 | 148367 | 32250.00 |
| 39 | 148368 | 35625.00 |
| 40 | 418369 | 18375.00 |
| 41 | 418370 | 7875.00 |
| 42 | 418371 | 28000.00 |
| 43 | 418372 | 33250.00 |
| 44 | 418373 | 35000.00 |
| 45 | 418374 | 5184.00 |
| 46 | 418375 | 18500.00 |
| 47 | 418376 | 1500.00 |
| 48 | 418377 | 2375.00 |
| 49 | 418378 | 6064.00 |
| 50 | 418379 | 6125.00 |
| 51 | 418380 | 10084.00 |
| 52 | 418381 | 28750.00 |
| 53 | 418382 | 42625.00 |
| 54 | 418383 | 2375.00 |
| 55 | 418384 | 65982.00 |
| 56 | 418385 | 14720.00 |
| 57 | 418386 | 94180.00 |
| 58 | 418387 | 27580.00 |
| 59 | 418388 | 76160.00 |
| 60 | 418389 | 199500.00 |
| 61 | 418390 | 47232.00 |
| 62 | 418391 | 26314.00 |
| 63 | 418392 | 8960.00 |
| 64 | 418393 | 99840.00 |
| 65 | 418394 | 101262.00 |
| 66 | 418395 | 19440.00 |
| 67 | 418396 | 36513.00 |
| 68 | 418397 | 27946.00 |
| 69 | 418398 | 58240.00 |
| 70 | 418399 | 53630.00 |

346



| | | |
|---|---|---|
| 71 | 418400 | 36757.00 |
| 72 | 418451 | 19440.00 |
| 73 | 418453 | 77184.00 |
| 74 | 418454 | 33792.00 |
| 75 | 418455 | 57895.00 |
| 76 | 418456 | 14004.00 |
| 77 | 418458 | 4223.00 |
| 78 | 418459 | 3584.00 |
| 79 | 418460 | 12000.00 |
| 80 | 418461 | 79500.00 |
| 81 | 418462 | 7875.00 |
| 82 | 418463 | 12019.00 |
| 83 | 418464 | 8413.00 |
| 84 | 418465 | 1600.00 |
| 85 | 418467 | 1620.00 |
| 86 | 418468 | 2590.00 |
| 87 | 418469 | 803.00 (ರದ್ದಾಗಿದೆ) |
| 88 | 418470 | 6000.00 |
| 89 | 418471 | 5100.00 |
| 90 | 418472 | 15000.00 |
| 91 | 418473 | 1500.00 |
| 92 | 418474 | 9720.00 |
| 93 | 418475 | 69500.00 |
| 94 | 418476 | 17769.00 |
| 95 | 418477 | 77500.00 |
| 96 | 418478 | 790.00 |
| 97 | 418480 | 10935.00 |
| 98 | 418483 | 41375.00 |
| 99 | 418481 | 124250.00 |
| 100 | 418482 | 82240.00 |
| 101 | 418484 | 4000.00 |
| 102 | 418485 | 1500.00 |
| 103 | 418486 | 56260.00 |
| 104 | 418487 | 52260.00 |

BSm/7566/14
342



| | | |
|---|---|---|
| 105 | 418488 | 58836.00 |
| 106 | 418489 | 161402.00 |
| 107 | 418490 | 194125.00 |
| 108 | 418491 | 10000.00 |
| 109 | 418492 | 40516.00 |
| 110 | 418493 | 1500.00 |
| 111 | 418494 | 96125.00 |
| 112 | 418495 | 58783.00 |
| 113 | 418496 | 283724.00 |
| 114 | 418497 | 139875.00 |
| 115 | 418498 | 141625.00 |
| 116 | 418499 | 9720.00 |
| 117 | 418500 | 62000.00 |
| 118 | 10276 | 18225.00 |
| 119 | 10277 | 123750.00 |
| 120 | 10278 | 14766.00 |
| 121 | 10279 | 24300.00 |
| 122 | 10280 | 101125.00 |
| 123 | 10281 | 8368.00 |
| 124 | 10282 | 14580.00 |
| 125 | 10283 | 8505.00 |
| 126 | 10284 | 64750.00 |
| 127 | 10286 | 21870.00 |
| 128 | 10287 | 131375.00 |
| 129 | 10288 | 46305.00 |
| 130 | 10289 | 124552.00 |
| 131 | 10290 | 163250.00 |
| 132 | 10291 | 52995.00 |
| 133 | 10292 | 23478.00 |
| 134 | 10293 | 25313.00 |
| 135 | 10294 | 21870.00 |
| 136 | 10295 | 70000.00 |
| 137 | 10296 | 46920.00 |
| 138 | 10297 | 52931.00 |

(348)



| | | |
|---|---|---|
| 139 | 10298 | 142931.00 |
| 140 | 10299 | 263000.00 |
| 141 | 10300 | 42375.00 |
| 142 | 10301 | 20125.00 |
| 143 | 10302 | 13125.00 |
| 144 | 10303 | 85500.00 |
| 145 | 10304 | 17000.00 |
| 146 | 10305 | 9720.00 |
| 147 | 10306 | 80500.00 |
| 148 | 10307 | 17227.00 |
| 149 | 10308 | 78000.00 |
| 150 | 10309 | 142200.00 |
| 151 | 10310 | 228625.00 |
| 152 | 10311 | 84250.00 |
| 153 | 10312 | 84250.00 |
| 154 | 10313 | 31200.00 |
| 155 | 10314 | 200000.00 |
| 156 | 10315 | 16000.00 |
| **ಒಟ್ಟು ಮೊತ್ತ** | | 7884321.00 |

8) ಮೇಲಿನ ಉಪ ಖಂಡಿಕೆ–7ರಲ್ಲಿನ ಖರ್ಚುಗಳಿಗೆ ಸಂಬಂಧಿಸಿದಂತೆ, ಕೂಲಿ ಹಣವನ್ನು ಗುತ್ತಿಗೆದಾರರು \ ಸರಬರಾಜುದಾರರಿಗೆ ಚೆಕ್‌ಗಳ ಮುಖೇನ ಹಣವನ್ನು ನೀಡಿರುವುದು ಕಂಡು ಬಂದಿದೆ. ಸದರಿ ಕಾಮಗಾರಿಗಳನ್ನು ನಿರ್ವಹಿಸಿದ ಕಾರ್ಮಿಕರು ಜಾಬ್ ಕಾರ್ಡ್ ಹೊಂದಿರುವ ಬಗ್ಗೆ ಸದರಿ ಜಾಬ್ ಕಾರ್ಡ್ ಪ್ರತಿಗಳಿಲ್ಲ. ಕೂಲಿ ಹಣ ಕೆಲಸ ನಿರ್ವಹಿಸಿದ ಕೂಲಿಗಾರರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಆದ ದಾಖಲೆಗಳಿಲ್ಲ. ಸದರಿ ಕಾರ್ಮಿಕರು ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ಬಗ್ಗೆ ಪಾಸ್ ಪುಸ್ತಕ ಅಥವಾ ಖಾತೆಯ ಉದ್ಧೃತ ಭಾಗವನ್ನು ಹಾಜರುಪಡಿಸಿಲ್ಲ. ಮುಂದುವರೆದು, ಸಾಮಗ್ರಿ ಖರೀದಿ ಬಾಬ್ತು ಸರಬರಾಜುದಾರರುಗಳ ರಸೀದಿ, ವೋಚರ್‌ಗಳಿಲ್ಲ. ಸದರಿ ಖರ್ಚುಗಳಲ್ಲಿ ಎಂಜಿಎನ್‌ಆರ್‌ಇಜಿ ಯೋಜನೆಗೆ ಮಾಡಿದ ಖರ್ಚುಗಳನ್ನು ಹೊರತುಪಡಿಸಿ, ಗಣಕಯಂತ್ರ ಆಪರೇಟರ್‌ರವರ ವೇತನ (ಮೇಲಿನ ಉಪ ಖಂಡಿಕೆ–7ರ ಕ್ರಮ ಸಂಖ್ಯೆ–88, 90, 101 & 156) ಮತ್ತು ಪಂಚಾಯತ್ ಕಾರ್ಯಾಲಯದ ಗಣಕಯಂತ್ರಕ್ಕೆ ಸಂಬಂಧಿತ ಖರ್ಚು (ಮೇಲಿನ ಉಪ ಖಂಡಿಕೆ–7ರ ಕ್ರಮ ಸಂಖ್ಯೆ–85, 89, 91, 102, 108, 110 & 157) ಗಳೂ ಸೇರಿವೆ. ಸದರಿ ಖರ್ಚುಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳಿಲ್ಲ;

9) 2011–12ನೇ ಸಾಲಿನ ಪಂಚಾಯತ್ ಲೆಕ್ಕಪರಿಶೋಧನಾ ವರದಿಯನ್ವಯ 5ನೇ ಎದುರುದಾರರು ದಿ:21/05/11 ರಿಂದ 12/09/11 ರವರೆಗೆ, 7ನೇ ಎದುರುದಾರರು ದಿ:09/11/11 ರಿಂದ 31/03/12ರವರೆಗೆ ಹಾಗೂ 2012–13ನೇ ಸಾಲಿನ ಪಂಚಾಯತ್ ಲೆಕ್ಕಪರಿಶೋಧನಾ ವರದಿಯನ್ವಯ ದಿ:01/04/12 ರಿಂದ 30/06/12 ರವರೆಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಆ ಅವಧಿಯಲ್ಲಿ 3ನೇ ಎದುರುದಾರರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

10) ಮೇಲಿನ ಉಪ ಖಂಡಿಕೆ–7ರ ಒಟ್ಟು ₹78,84,321/– ಖರ್ಚುಗಳ ಪೈಕಿ 5ನೇ ಎದುರುದಾರರು ಅಂದಾಜು ₹33,41,135/–ಗಳಿಗೆ ಮತ್ತು 7ನೇ ಎದುರುದಾರರು ಅಂದಾಜು ₹45,98,926/– [4543186 + 55740 – ಮೇಲಿನ ಉಪ ಖಂಡಿಕೆ–6 ಮತ್ತು 7]ಗಳಿಗೆ ಜವಾಬ್ದಾರರಾಗಿದ್ದಾರೆ;

11) ಮೂರನೇ (3ನೇ) ಎದುರುದಾರರು ಒಟ್ಟು ₹79,40,061/– [7884321 + 55740 – ಮೇಲಿನ ಉಪ ಖಂಡಿಕೆ–6 ಮತ್ತು 7] ಗಳ ಮೊತ್ತಕ್ಕೆ ಜವಾಬ್ದಾರರಾಗಿದ್ದಾರೆ.

13. ಮೇಲ್ಕಂಡ .ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 3, 5 ಮತ್ತು 7ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

14. ಒಂದನೇ (1ನೇ) ಎದುರುದಾರರು ಆಲದಕೇರಿ ಗ್ರಾಮ ಪಂಚಾಯತ್‌ನಲ್ಲಿ ಗುಮಾಸ್ತರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. 2ನೇ ಎದುರುದಾರರು ದಿನಾಂಕ:01/01/10 ರಿಂದ ದಿ:31/05/11ರವರೆಗೆ ಕಾರ್ಯದರ್ಶಿ–1ನೇ ಶ್ರೇಣಿ ಆಗಿ ಹಾಗೂ 6ನೇ ಎದುರುದಾರರು ದಿ:13/09/11 ರಿಂದ 08/11/11 ರವರೆಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. 4ನೇ ಎದುರುದಾರರು ಪಂಚಾಯತ್‌ನ ಮಾಜಿ ಸದಸ್ಯರಾಗಿದ್ದಾರೆ. ಮೇಲಿನ ಉಪ ಖಂಡಿಕೆ–7ರಲ್ಲಿ ಹೇಳಿದ ಖರ್ಚುಗಳಲ್ಲಿ 1, 2, 4 ಮತ್ತು 6ನೇ ಎದುರುದಾರರುಗಳ ಪಾತ್ರ ಕಂಡು ಬಂದಿಲ್ಲವಾದ್ದರಿಂದ, ಸದರಿಯವರುಗಳ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

15. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 3, 5 ಮತ್ತು 7ನೇ ಎದುರುದಾರರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

16. ಮೂರನೇ (3ನೇ) ಎದುರುದಾರರು ಗ್ರಾಮ ಪಂಚಾಯತ್‌ನ ಮಾಜಿ ಅಧ್ಯಕ್ಷರಾಗಿದ್ದರಿಂದ, ಸದರಿಯವರಿಂದ ದುರುಪಯೋಗದ ಮೊತ್ತವನ್ನು ವಸೂಲಿ ಮಾಡಲು ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿದೆ.

17. ಅದಲ್ಲದೆ, 5 ಮತ್ತು 7ನೇ ಎದುರುದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 5 ಮತ್ತು 7ನೇ ಎದುರುದಾರರುಗಳು ಕ್ರಮವಾಗಿ, ದಿನಾಂಕ:31/05/2013 ಮತ್ತು 30/06/2016 ರಂದು ನಿವೃತ್ತಿ ಹೊಂದಿರುವುದರಿಂದ 5ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಕಾಲಮಿತಿ ಬಾಧಕವನ್ನು ಮನ್ನಿಸಿ, **ಕೆಸಿಎಸ್ ನಿಯಮ** 214(2)(ಬಿ)(i)ರ ಅಡಿ ಸದರಿಯವರುಗಳ ವಿರುದ್ಧ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

18. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 5 ಮತ್ತು 7ನೇ ಎದುರುದಾರರು ದಿನಾಂಕ:31/05/2013 ಮತ್ತು 30/06/2016 ರಂದು ನಿವೃತ್ತಿ ಹೊಂದಿದ್ದಾರೆ.

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**